**ಓ ಎಸ್ ನಂಃ 167-15** **ಪಿಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 16.09.2019 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಎಸ್ ಬಿ ವಕೀಲರಿಂದ ಪ್ರತಿವಾದಿ ಪರವಾಗಿಃ-**

..8.. ನಾನು 1995 ನೇ ಸಾಲಿನಲ್ಲಿ ತಾರಿಹಾಳ ಜಿಲ್ಲಾ ಪಂಚಾಯತ ಕ್ಷೇತ್ರದಿಂದ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ದೆ ಮಾಡಿದ್ದೆ ಎಂದರೆ ಸರಿ, ಸಾಕ್ಷಿ ಸ್ವತಃ ಹೇಳುತ್ತಾರೆ ನಮ್ಮ ಮಾವನವರೆ ನನಗೆ ನಿಲ್ಲಿಸಿದ್ದರು. ನಾನು ಸದರಿ ಚುನಾವಣೆಯಲ್ಲಿ ಸೋತಿರುತ್ತೇನೆಂದರೆ ಸರಿ. ಕಟ್ಟಿ ರವರ ಮನೆತನದಲ್ಲಿ ತಿಳುವಳಿಕೆ ಇರುವ ಮಹಿಳೆ ಎಂದರೆ ನಾನೇ ಎಂದರೆ ಸರಿಯಲ್ಲ, ಸಾಕ್ಷಿ ಸ್ವತಃ ಅವರವರ ಬಾಳ್ವೆಗೆ ಅವರೆಲ್ಲರೂ ತಿಳುವಳಿಕೆ ಉಳ್ಳವರು ಇರುತ್ತಾರೆಂದು ನುಡಿಯುತ್ತಾರೆ. ನನ್ನ ಮನೆತನಕ್ಕೆ ಸಂಬಂಧಪಟ್ಟಂತೆ ನಾನು ತಿಳುವಳಿಕೆ ಉಳ್ಳ ಮಹಿಳೆ ಎಂದರೆ ಸರಿ.

..9.. 1959 ನೇ ಸಾಲಿನಲ್ಲಿ ನನ್ನ ಮದುವೆಯಾಗಿರಲಿಲ್ಲವೆಂದರೆ ಸರಿ. 1959 ನೇ ಸಾಲಿನಲ್ಲಿ ನನ್ನ ಗಂಡ ಜನಿಸಿರಲಿಲ್ಲವೆಂದರೆ ನನಗೆ ಗೊತ್ತಿಲ್ಲ. ನನಗೆ ಈಗ 54 ವರ್ಷ ವಯಸ್ಸು. ನನಗೂ ಮತ್ತು ನನ್ನ ಗಂಡನ ನಡುವೆ ಅಂದಾಜು 3 ವರ್ಷಗಳ ಅಂತರವಿತ್ತಾ ಅಂತಾ ಕೇಳಿದ ಪ್ರಶ್ನೆಗೆ ನನಗೆ ಗೊತ್ತಾಗುವುದಿಲ್ಲವೆಂದು ನುಡಿಯುತ್ತಾಳೆ. ನನ್ನ ಗಂಡ ತೀರಿಕೊಳ್ಳುವಾಗ ಆತನಿಗೆ ಎಷ್ಟು ವಯಸ್ಸು ಅಂತಾ ನನಗೆ ಗೊತ್ತಾಗಿಲ್ಲ, ಮತ್ತು ನಾನು ತಿಳಿದುಕೊಂಡಿಲ್ಲ. ನನ್ನ ಗಂಡ ವಿದ್ಯಾವಂತನಲ್ಲ.

..10.. 1959 ನೇ ಸಾಲಿನಲ್ಲಿ ನನ್ನ ಗಂಡ ಅವರ ತಂದೆಗೆ ಹೆಣ್ಣು ಮಕ್ಕಳನ್ನು ಹೊರತುಪಡಿಸಿದರೆ ಒಬ್ಬನೇ ಮಗನೆಂದರೆ ಸುಳ್ಳು. ಆದರೆ 1959 ನೇ ಸಾಲಿನಲ್ಲಿ ನನ್ನ ಗಂಡ ಜನಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ನನ್ನ ಗಂಡ 1959 ರಲ್ಲಿ ಜನಿಸಿದ್ದಾನೆ ಅಂತಾ ತೋರಿಸಲು ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲ. ಆದರೆ ನನ್ನ ಗಂಡನ ಜನನ ದಾಖಲೆಯನ್ನು ನಾನು ಹಾಜರಪಡಿಸಿಲ್ಲ. ನ್ಯಾಯಾಲಯಕ್ಕೆ ನಮ್ಮ ಪರವಾಗಿ ಹಾಜರಪಡಿಸಿರುವ ದಾಖಲೆಗಳನ್ನು ಅದಕ್ಕಿಂತ ಪೂರ್ವದಲ್ಲಿ ಓದಿ- ತಿಳಿದುಕೊಂಡು ಹಾಜರಪಡಿಸಿದ್ದೇನೆಂದರೆ ಸರಿ. ಜಮೀನು ಬ್ಲಾಕ ನಂ. ಈಗ 75 ಇರುವ ಈ ಸಂಖ್ಯೆ ಮೊದಲಿಗೆ ಸ. ನಂಃ 30/2 ಇತ್ತು ಎಂದರೆ ಸರಿ. ಆ ರೀತಿ ಬದಲಾವಣೆಯಾಗಬೇಕಾದರೆ ಜಿಲ್ಲಾಧಿಕಾರಿ, ಧಾರವಾಡ ರವರು ದಿಃ 19.12.2009 ರಂದು ಆದೇಶ ಮಾಡಿದ್ದಾರೆಂದರೆ ಸರಿ. ನಿಪಿ.67 ರಂತೆ ನಾನೇ ದಾಖಲೆಗಳನ್ನು ಹಾಜರಪಡಿಸಿದ್ದೇನೆಂದರೆ ಸರಿ.

ಸದರಿ ನಿಪಿ.67 ರಲ್ಲಿ ಅಂದರೆ ಡ-ನಂಃ 590 ರಲ್ಲಿರುವ ವಿಷಯಗಳನ್ನು ಓದಿ ಹೇಳಲಾಗಿ ಸರಿ ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆ ಪ್ರಕಾರ ಸ ನಂಃ 30/2 ರಲ್ಲಿ 8 ಎಕರೆ ಜಮೀನನ್ನು 2 ನೇ ಪ್ರತಿವಾದಿ ಹೆಸರಿನಲ್ಲಿ ಅವರ ಹಿಸ್ಸೆಗೆ ದಾಖಲಾಗಿದೆಂದರೆ ಸರಿ. ಸ ನಂಃ 30/4 ಇದರಲ್ಲಿ 8 ಎಕರೆ 28 ಗುಂಟೆ ಜಮೀನನ್ನು ಚನ್ನಪ್ಪ ಕಟ್ಟಿ ರವರ ಹೆಸರಿನಲ್ಲಿ ದಾಖಲಾಗಿದೆಂದರೆ ಸರಿ. ಸದರಿ ದಾಖಲೆ ಡ-ನಂಃ 591 ರ ಪ್ರಕಾರ ಇರುವ ಸಂಗತಿಗಳನ್ನು ಓದಿ ಹೇಳಲಾಗಿ ಸರಿ ಇದೆ ಎಂದು ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆ ಪ್ರಕಾರ 17 ಎಕರೆ ಜಮೀನನ್ನು 2 ನೇ ಪ್ರತಿವಾದಿಯ ಹಿಸ್ಸೆಗೆ ಕೊಡಲಾಗಿದೆ ಅಂತಾ ಮಾಡಿದ ಸಲಹೆಗೆ ಹೌದು ಎಂದು ಒಪ್ಪಿಕೊಂಡು ಸಾಕ್ಷಿದಾರಳು ಸ್ವತಃ ಹೇಳುತ್ತಾರೆ ನನ್ನ ಮಾವ 2 ನೇ ಪ್ರತಿವಾದಿ ಮನೆಗೆ ಹಿರಿಯನಾದ ಕಾರಣ ಅವನ ಹೆಸರಿನಲ್ಲಿ ಹಚ್ಚಿಸೋಣ ಮುಂದೆ ಆತನು ಎಲ್ಲರಿಗೂ ಪಾಲು ಕೊಡುತ್ತಾನೆ ಅಂತಾ ಹೇಳಿದ್ದರು. ದಿಃ 3.8.1959 ರಂದು ವರದಿಯ ಮೇಲೆ ಮಂಜೂರಾಗಿದೆ ಎಂದರೆ ಸರಿ.

..11.. ನಾನು 1964 ನೇ ಸಾಲಿನಲ್ಲಿ ಜನಿಸಿರುತ್ತೇನೆ. ನನ್ನನ್ನು ಕಟ್ಟಿ ರವರ ಮನೆತನಕ್ಕೆ ಸೊಸೆ ಅಂತಾ ತೆಗೆದುಕೊಂಡ ಮೇಲೆ ನಮ್ಮ ಹಾಗೂ ಅವರ ನಡುವೆ ಸಂಬಂಧಗಳು ಬೆಳೆದವು ಎಂದರೆ ಸರಿ. ಈ ದಾಖಲೆ ನಾನು ಜನಿಸುವಗಿಂತ ಮೊದಲೇ ಆದಂತಹ ದಾಖಲೆ ಎಂದರೆ ಸರಿ. ನಿಪಿ.67 ರ ಪ್ರಕಾರ ಬ್ಲಾಕ ನಂಃ 75 ಜಮೀನು 2 ನೇ ಪ್ರತಿವಾದಿ ಹೆಸರಿನಲ್ಲಿ ದಾಖಲಾಗಿದೆಂದರೆ ಸರಿ. ಇದೂವರೆಗೂ ಅದು ಬಸಪ್ಪ ರವರ ಹೆಸರಿನಲ್ಲಿದೆ ಅಂತಾ ಮಾಡಿದ ಸಲಹೆಗೆ ಸಾಕ್ಷಿದಾರರು ವಾಟ್ನಿಯಾಗಿಲ್ಲ ಆದ್ದರಿಂದ ಅದು ಅವರ ಹೆಸರಿನಲ್ಲಿದೆ ಎಂದು ನುಡಿಯುತ್ತಾಳೆ. 2009 ನೇಸಾಲಿನಲ್ಲಿ ಜಿಲ್ಲಾಧಿಕಾರಿಗಳು, ಧಾರವಾಡ ರವರು ಹಳೆಯ ಸರ್ ನಂಬರಿನಿಂದ ಬ್ಲಾಕ ನಂಃ 75 ಅಂತಾ ದಾಖಲು ಮಾಡುವಾಗ ಕ್ಷೇತ್ರಗಳು ಸಹ ಹೆಚ್ಚು-ಕಡಿಮೆಯಾದವು ಎಂದರೆ ಸರಿ. ಸದ್ಯ ಬ್ಲಾಕ ನಂಃ 75 ಇದರ ಕ್ಷೇತ್ರ 16 ಎಕರೆ 25 ಗುಂಟೆ ಎಂದರೆ ಸರಿ. 1959 ನೇ ಸಾಲಿನಲ್ಲಿ ವಾಟ್ನಿಯಾದ ನಂತರ ಇದನ್ನು ನನ್ನ ಗಂಡನಾಗಲಿ, 3 ನೇ ಪ್ರತಿವಾದಿಯಾಗಲಿ ಎಲ್ಲಿಯೂ ಪ್ರಶ್ನಿಸಿಲ್ಲ ಅಂತಾ ಮಾಡಿದ ಸಲಹೆಗೆ ಸಾಕ್ಷಿದಾರಳು ವಾಟ್ನಿಯಾಗಿಲ್ಲ, ಅವರವರು ಹಚ್ಚಿಸಿಕೊಂಡಿರುತ್ತಾರೆಂದು ನುಡಿಯುತ್ತಾಳೆ. ನನ್ನ ಗಂಡ ಜೀವಂತ ಇರುವಾಗ ತಾನಾಗಲಿ, 3 ನೇ ಪ್ರತಿವಾದಿಯಾಗಲಿ ಹಾಗೂ ಚನ್ನಪ್ಪನಾಗಲಿ 2 ನೇ ಪ್ರತಿವಾದಿ ವಿರುದ್ಧ ಯಾವುದೇ ಪ್ರಕರಣ ದಾಖಲು ಮಾಡಿರಲಿಲ್ಲವೆಂದರೆ ಸರಿ.

**ಓ ಎಸ್ ನಂಃ 167-15** **ಪಿಡಬ್ಲ್ಯೂ-1**

..12.. ನಿಪಿ.39 ರ ಪ್ರಕಾರ ರಾಮರಾವ ದೇಸಾಯಿ ರವರ ಹೆಸರು ಕಂಡುಬರುತ್ತಿದ್ದು, ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲವೆಂದರೆ ಸರಿ. ಸದರಿಯವರ ಹೆಸರು ಈ ದಾಖಲೆಯಲ್ಲಿ ಹೇಗೆ ಬಂತು ಹಾಗೂ ಏಕೆ ಬಂತು ಹೇಳಲು ಆಗುತ್ತಿದಿಯಾ ಅಂತಾ ಕೇಳಿದ ಪ್ರಶ್ನೆಗೆ ನಂತರದಲ್ಲಿ ಸದರಿ ಹೆಸರನ್ನು ಕಡಿಮೆ ಮಾಡಿಸಲಾಗಿದೆ ಎಂದು ನುಡಿಯುತ್ತಾರೆ. ಆ ಕುರಿತು ಡ-ಆದೇಶ ಆಗಿದಿಯಾ ಅಂತಾ ಕೇಳಿದ ಪ್ರಶ್ನೆಗೆ ಆಗಿದೆ ಡ- ಉತಾರ ಹಾಜರಪಡಿಸಿದ್ದೇನೆ.

..13.. ನನ್ನ ಮಾವ ಚನ್ನಪ್ಪ 1987 ರಲ್ಲಿ ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡ ನಂತರ ಅವರ ಹೆಸರಿನಲ್ಲಿದ್ದಂತಹ ಜಮೀನುಗಳಿಗೆ ವಾರಸಾ ಮಾಡಲಾಗಿದೆ ಅಂತಾ ಮಾಡಿದ ಸಲಹೆಗೆ ಕೆಲವು ಜಮೀನುಗಳಿಗೆ ಮಾಡಲಾಗಿದೆ, ಇನ್ನೂ ಕೆಲವು ಜಮೀನುಗಳಿಗೆ ಮಾಡಲಾಗಿಲ್ಲವೆಂದು ನುಡಿಯುತ್ತಾರೆ. ನಿಪಿ.106 ನ್ನು ನಾನೇ ಹಾಜರಪಡಿಸಿದ್ದೇನೆಂದರೆ ಸರಿ. ಅದರಲ್ಲಿರುವ ವಿಷಯವನ್ನು ಓದಿ ಹೇಳಲಾಗಿ ನಮ್ಮ ಮಾವನವರು ಕುಟುಂಬದ ಮ್ಯಾನೇಜರ ಅಂತಾ ತಮಗೆ ಹೇಗೆ ಬೇಕೋ ಹಾಗೆ ಹಚ್ಚಿಸಿರುತ್ತಾರೆಂದು ನುಡಿಯುತ್ತಾಳೆ. ಸದರಿ ದಾಖಲೆ ಪ್ರಕಾರ 2 ಆಸ್ತಿಗಳಿಗೆ ಸಂಬಂಧಪಟ್ಟಂತೆ ವಾರಸಾ ಆಗಿರುವುದು ಕಂಡುಬರುತ್ತದೆಂದರೆ ಸರಿ. ಡ-ಆದೇಶವನ್ನು ಪ್ರಶ್ನೆ ಮಾಡಿ ನಾವಾಗಲಿ, 3 ನೇ ಪ್ರತಿವಾದಿಯಾಗಲಿ ಎಲ್ಲಿಯಾದರೂ ಪ್ರಶ್ನೆ ಮಾಡಿದ್ದೀರಾ ಅಂತಾ ಮಾಡಿದ ಸಲಹೆಗೆ ಆ ರೀತಿ ಪ್ರಶ್ನೆ ಮಾಡುವ ಸಂದರ್ಭವೇ ಬಂದಿಲ್ಲವೆಂದು ನುಡಿಯುತ್ತಾಳೆ. ನಿಪಿ.96 ರಂತೆ ದಾಖಲೆ ನಾನೇ ಹಾಜರಪಡಿಸಿದ್ದೇನೆಂದರೆ ಸರಿ.

**ಕೋರಿಕೆಯ ಮೇರೆಗೆ ಹೆಚ್ಚುವರಿ ಪಾಟಿ ಸವಾಲಿಗಾಗಿ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**